# ಕರ್ನಾಟಕ ವಿಧಾನಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 52 (440) |
| ಸದಸ್ಯರ ಹೆಸರು | : | ಶ್ರೀ ಪ್ರಕಾಶ್ ಕೆ. ರಾಥೋಡ್<br>(ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 19-07-2024 |
| ಉತ್ತರಿಸುವ ಸಚಿವರು | : | ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ<br>ಕನ್ನಡ ಮತ್ತು ಸಂಸ್ಕೃತಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನವರಸಪುರ ನೃತ್ಯೋತ್ಸವ ಕಾರ್ಯಕ್ರಮವು ಯಾವ ಸಾಲಿನಲ್ಲಿ ಪ್ರಾರಂಭವಾಯಿತು ಹಾಗೂ ಎಷ್ಟು ವರ್ಷಗಳಿಂದ ನಡೆಸಿಕೊಂಡು ಬರಲಾಗಿದೆ ಮತ್ತು ಎಷ್ಟು ವರ್ಷಗಳಿಂದ ನಿಲ್ಲಿಸಲಾಗಿದೆ; (ವಿವರ ನೀಡುವುದು) | ನವರಸಪುರ ನೃತ್ಯೋತ್ಸವವನ್ನು 1989ರಲ್ಲಿ ವಿಜಯಪುರ ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು. 1989 ರಿಂದ 2006ರ ವರೆಗೆ ಹಾಗೂ 2011 ಮತ್ತು 2014-15ನೇ ಸಾಲಿನಲ್ಲಿ ನವರಸಪುರ ನೃತ್ಯೋತ್ಸವ ಕಾರ್ಯಕ್ರಮವನ್ನು ಆಚರಿಸಲಾಗಿದೆ.<br><br>ನವರಸಪುರ ನೃತ್ಯೋತ್ಸವಕ್ಕೆ 2015-16 ಮತ್ತು 2016-17ನೇ ಸಾಲಿನಲ್ಲಿ ತಲಾ ರೂ.30.00ಲಕ್ಷಗಳಂತೆ ಒಟ್ಟು ರೂ.60.00ಲಕ್ಷಗಳನ್ನು ಜಿಲ್ಲಾಧಿಕಾರಿ, ವಿಜಯಪುರ ಜಿಲ್ಲೆ, ಇವರಿಗೆ ಬಿಡುಗಡೆ ಮಾಡಲಾಗಿದ್ದು, ಬರಗಾಲದ ಹಿನ್ನಲೆಯಲ್ಲಿ ಸದರಿ ಉತ್ಸವವನ್ನು ಮುಂದೂಡಲಾಗಿರುತ್ತದೆ.<br><br>ಮುಂದುವರೆದು, 2016ನೇ ಸಾಲಿನಿಂದ ಇಲ್ಲಿಯವರೆಗೆ ನವರಸಪುರ ನೃತ್ಯೋತ್ಸವ ಕಾರ್ಯಕ್ರಮವನ್ನು ಆಚರಣೆ ಮಾಡಿರುವುದಿಲ್ಲ. |
| ಆ) | ಈ ಅಭೂತಪೂರ್ವ ನೃತ್ಯೋತ್ಸವ ಕಾರ್ಯಕ್ರಮವನ್ನು ನಿಲ್ಲಿಸಿರುವುದರಿಂದ ಸಂಗೀತಾಸಕ್ತರು ಹಾಗೂ ನೃತ್ಯ ಪ್ರೇಮಿಗಳಿಗೆ ತೀವ್ರ ನಿರಾಸೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಪ್ರತಿ ವರ್ಷ ರಾಜ್ಯದಲ್ಲಿ ಆಚರಿಸಲಾಗುವ ಮೈಸೂರು ದಸರಾ ಉತ್ಸವ, ಹಂಪಿ ಉತ್ಸವ, ಕದಂಬೋತ್ಸವ, ಕನಕಗಿರಿ ಉತ್ಸವ, ಆನೆಗುಂದಿ ಉತ್ಸವ ಇತ್ಯಾದಿ ಹಾಗೂ ಇಲಾಖಾ ವತಿಯಿಂದ ಹಮ್ಮಿಕೊಳ್ಳುವ ಗಿರಿಜನ ಉತ್ಸವ, ಜನಪರ ಉತ್ಸವ, ಯುವ ಸೌರಭ, ಚಿಗುರು, ಸಾಂಸ್ಕೃತಿಕ ಸೌರಭ ಮತ್ತು ಕಲಾತಂಡಗಳ ಪ್ರಾಯೋಜನೆ ಮುಂತಾದ ಕಾರ್ಯಕ್ರಮಗಳಲ್ಲಿ ನಾಡಿನ ಜಾನಪದ, ಸಂಗೀತ, ನೃತ್ಯ ಮತ್ತು ನಾಟಕ ಮುಂತಾದ ಕಲಾವಿದರಿಗೆ ಅವಕಾಶ ಕಲ್ಪಿಸಲಾಗುತ್ತಿದ್ದು, ಸಂಗೀತಾಸಕ್ತರು, ನೃತ್ಯಸಕ್ತರು ಈ ಉತ್ಸವಗಳಲ್ಲಿ ಭಾಗವಹಿಸುತ್ತಿರುತ್ತಾರೆ. |
| ಇ) | ಈ ಸಾಲಿನಿಂದಾದರೂ ಪುನಃ ನವರಸಪುರ ನೃತ್ಯೋತ್ಸವ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದೇ? | 2024-25ನೇ ಸಾಲಿನಲ್ಲಿ ಜಿಲ್ಲಾಧಿಕಾರಿ, ವಿಜಯಪುರ ಜಿಲ್ಲೆ, ಇವರಿಂದ ನವರಸಪುರ ನೃತ್ಯೋತ್ಸವ ಆಚರಣೆ ಮಾಡುವ ಕುರಿತು ಪ್ರಸ್ತಾವನೆ ಸ್ವೀಕೃತವಾದಲ್ಲಿ ಪರಿಶೀಲಿಸಲಾಗುವುದು. |

ಸಂಖ್ಯೆ: ಕಸಂವಾ 39 ಕವಿಸ 2024.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.